# ಮೀಸಲಾತಿ: ಅತೃಪ್ತಿಯ ಹೊಗೆ

ಮೀಸಲಾತಿ ವಿರೋಧಿ ಚಳವಳಿ ಭುಗಿಲೇಳುತ್ತಿದೆ. ಅದು ಗುಜರಾತಿನಿಂದಲೇ ಪ್ರಾರಂಭವಾಗಿರುವುದು ವಿಶೇಷ. ಆರ್ಥಿಕವಾಗಿ ಬಲಿಷ್ಠವಾಗಿರುವ ಜಾತಿಗೆ ಸೇರಿದ ಹಾರ್ದಿಕ್ ಪಟೇಲ್ ಎಂಬ 22 ರ ಹರೆಯದ ಹುಡುಗ ಆ ಬೃಹತ್ ಚಳವಳಿಯ ನೇತೃತ್ವ ವಹಿಸಿದ್ದಾನೆ. ಆತನಿಗೆ ಭಾರತೀಯ ಇತಿಹಾಸ, ಪರಂಪರೆ, ಸಂಸ್ಕೃತಿಯ ಸ್ಪಷ್ಟ ಪರಿಚಯವಾಗಿದೆಯೆಂದು ಹೇಳಲಾಗುವುದಿಲ್ಲ. ಆದರೂ ಸಹಸ್ರ ಸಂಖ್ಯೆಯಲ್ಲಿ ಮೇಲ್ಜಾತಿಯ ಹಿರಿಯರು, ಕಲಿತವರು ಆತನ ಬೆಂಬಲಕ್ಕಿದ್ದಾರೆ? ಅಂದರೆ ಮೇಲ್ಜಾತಿಯ ಹಿರಿಯರ, ಕಲಿತವರ ಸುಪ್ತ ಮನಸ್ಸಿನಲ್ಲಿ ಮೀಸಲಾತಿಯ ಬಗ್ಗೆ ಅತೃಪ್ತಿಯ ಹೊಗೆಯಾಡುತ್ತಿದೆ. ಪ್ರಾಯಶಃ ಅವರೆಲ್ಲರೂ ತಮ್ಮ ಮಕ್ಕಳನ್ನು ಹಾರ್ದಿಕ್ ಪಟೇಲನಲ್ಲಿ ಕಾಣಲು ಬಯಸಿದ್ದಾರೆ. ಆತನ ಸಿಟ್ಟು, ಆಕ್ರೋಶ ತಮ್ಮ ಮಕ್ಕಳದೇ ಎಂದು ನಂಬಿದ್ದಾರೆ. ಇದೇ ಚಿತ್ರ ಈಗ ಆಂಧ್ರ ಪ್ರದೇಶದಲ್ಲಿಯೂ ಕಾಣಿಸಿಕೊಳ್ಳುತ್ತಿದೆ. ನಿಧಾನವಾಗಿ ಬೇರೆ ರಾಜ್ಯಗಳಿಗೂ ಹಬ್ಬಿದರೆ ಆಶ್ಚರ್ಯವಿಲ್ಲ.

ಸಮಾನತೆ, ಭ್ರಾತೃತ್ವ ನಮ್ಮ ಸಂವಿಧಾನದ ಮೂಲ ಆಶಯಗಳು. ಮೀಸಲಾತಿ ಆರ್ಥಿಕ ಅಸಮಾನತೆಯನ್ನು ತೊಡೆಯುವತ್ತ ಇಟ್ಟ ಒಂದು ಪುಟ್ಟ ಹೆಜ್ಜೆಯಷ್ಟೆ. ಅದೇ ಸಮಗ್ರ ಪರಿಹಾರವಲ್ಲ. ಹಾಗೆ ನೋಡಿದರೆ ಜಾತಿವ್ಯವಸ್ಥೆಯೆ ಮೀಸಲಾತಿಯ ಮೂಲ. ಈಗ ನಡೆಯುತ್ತಿರುವುದು ಮೀಸಲಾತಿಯ ಹಿಮ್ಮುಖ ಯಂತ್ರಚಾಲನೆ (Reverse engineering). ಸಹಸ್ರಾರು ವರ್ಷಗಳಿಂದ ಭೂಮಿಯ ಒಡೆತನ, ಆಡಳಿತ, ಆಸ್ತಿ ಅಂತಸ್ತು, ವ್ಯಾಪಾರ ವಹಿವಾಟು ಇತ್ಯಾದಿ ವಿಷಯಗಳಲ್ಲಿ ಮೀಸಲಾತಿ ಅನುಭವಿಸಿದ ಜಾತಿಜನಗಳ ಖಾತೆಯಲ್ಲಿ ಅಲ್ಪಸ್ವಲ್ಪವಾದರೂ ಉಳಿಕೆ ಶಿಲ್ಕು ಇರುವುದರಿಂದ ಸಮಾನತೆಯ ದೃಷ್ಟಿಯಿಂದ ಈಗ ಅಂಥವರು ಸ್ವಲ್ಪ ಉದಾರವಾಗಬೇಕಾಗಿರುವ ಅನಿವಾರ್ಯತೆ ಇದೆ. ಬ್ರಾಹ್ಮಣ್ಯ ಈಗ ಜಾತಿ ಬ್ರಾಹ್ಮಣರಲ್ಲಿ ಉಳಿದಿಲ್ಲ, ಬಲಿಷ್ಠ ಮಧ್ಯಮ ಜಾತಿಗಳಿಗೆ ವರ್ಗವಾದಂತಿದೆ. ಜಾತಿವ್ಯವಸ್ಥೆಯ ಒಳಗಡೆ ಬಹುಪಕ್ಷೀಯ ಪ್ರಜಾಪ್ರಭುತ್ವ ಒಂದು ಗೊಂದಲದ ಗೂಡು. ಆದ್ದರಿಂದ ಈ ಹೋರಾಟ ಗುಪ್ತವಾದ ಬೇರೇನೋ ಉದ್ದೇಶ ಹೊಂದಿದೆ ಎಂದು ಗೋಚರಿಸುತ್ತದೆ.

ಮೇಲ್ಜಾತಿಯ ಸಾಮಾನ್ಯರ ಕಣ್ಣಿಗೆ ರಾಚುವುದು ಸರ್ಕಾರಿ ಹುದ್ದೆಗಳಲ್ಲಿ ಮತ್ತು ಉನ್ನತ ಶಿಕ್ಷಣದಲ್ಲಿ ಪರಿಶಿಷ್ಟರಿಗೆ ಸಿಗುವ ಮೀಸಲಾತಿ. ಇದನ್ನು ಅರ್ಧಶತಮಾನದಿಂದ ಕೊಡುತ್ತಾ ಬಂದಿದ್ದರೂ ಆಯಾ ಜಾತಿ, ವರ್ಗಗಳ ಜನಸಂಖ್ಯೆಯ ಪ್ರಮಾಣಕ್ಕೆ ಪೂರಕವಾಗಿ ಈಡೇರಿಲ್ಲ. ಡಾ.ಬಿ.ಆರ್. ಅಂಬೇಡ್ಕರ್ ದಲಿತ, ಹಿಂದುಳಿದವರ ಸಬಲೀಕರಣಕ್ಕೆ ಬೇರೆಯೆ ಆದ ರಾಜಕೀಯ ಮಾರ್ಗವನ್ನು ತೋರಿದ್ದರು. ಅದು ಕಾರಣಾಂತರಗಳಿಂದ ಮೀಸಲಾತಿಯಲ್ಲಿ ಪರ್ಯಾವಸನವಾಯಿತು. ಒಟ್ಟಾರೆ ಕೇವಲ ಶೇ.5 ರಷ್ಟು ಉದ್ಯೋಗ ಒದಗಿಸುವ ಸರ್ಕಾರಿ ಹುದ್ದೆಗಳಲ್ಲಿನ ಮೀಸಲಾತಿಯಿಂದ ಕೆಳವರ್ಗದ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಬಹುದೆಂಬುದು ಅಸಾಧ್ಯವಾದ ಮಾತು. ಇತರ ಖಾಸಗೀ ಉತ್ಪಾದನೆ ಮತ್ತು ಸೇವಾವಲಯಗಳಲ್ಲಿ ಈ ವರ್ಗದ ಜನರಿಗೆ ಅವಕಾಶಗಳ ಬಾಗಿಲು ತೆರೆದುಕೊಳ್ಳದೇ ಇದ್ದರೆ ಒಳಗೊಳ್ಳುವಿಕೆ ಸಾಧ್ಯವಾಗುವುದಿಲ್ಲ. ಮಡಿ, ಮೈಲಿಗೆಯ ಸಂಸ್ಕೃತಿಯಲ್ಲಿ ಕೆಳಜಾತಿಯವನೊಬ್ಬ ತಳ್ಳುಗಾಡಿಯ ಟೀ ಅಂಗಡಿ ಅಥವಾ ಯಾವುದೇ ವಹಿವಾಟು ಇಟ್ಟುಕೊಂಡರೆ ಇತರರು ಕೊಳ್ಳಲು ಬರುವುದಿಲ್ಲ. ಹಿಂದುಳಿದ ಜನರು ಉನ್ನತ ಶಿಕ್ಷಣ ಪಡೆದು ಸ್ಪರ್ಧಿಸಿ ಪೈಪೋಟಿ ನೀಡಿ ಹಾವಿನ ಹಾದಿಯಲ್ಲಿ ಸರಾಗ ಮೇಲೇರುತ್ತಿರುವಾಗಲೇ ಜಾತಿಯೆಂಬ ಏಣಿಗೆ ಅಡ್ಡಸಿಕ್ಕಿ ಕೆಳಗೆ ಇಳಿಯಬೇಕಾಗುತ್ತದೆ.

ಆದ್ದರಿಂದ ಈ ಮಾದರಿಯ ಹೋರಾಟಗಳು ಬೇಕಾಗಿರುವುದು ಅಸ್ಪೃಶ್ಯತೆಯ ನಿವಾರಣೆಗಾಗಿ, ಜಾತಿವಿನಾಶಕ್ಕಾಗಿ, ಮನುಷ್ಯ ಮನುಷ್ಯರ ನಡುವೆ ತಾರತಮ್ಯ ನಿವಾರಣೆಗಾಗಿ. ವಿಪರ್ಯಾಸವೆಂದರೆ ಜಾತಿಪದ್ಧತಿ ಇಂದಿಗೂ ಭದ್ರಕೋಟೆಯಂತಿದೆ, ಅದು ಪೋಷಿಸುವ ಅಸಮಾನತೆ ಸಂವಿಧಾನ ವಿರೋಧಿಯಾಗಿದ್ದರೂ ಚಾಲ್ತಿಯಲ್ಲಿದೆ. ಪ್ರತಿದಿನವೂ ಪತ್ರಿಕೆ ತೆರೆದರೆ ಅಸ್ಪೃಶ್ಯತೆ ಕುರಿತ ಹೇರಳ ಸುದ್ದಿಗಳು ಉದಾಹರಣೆಗೆ ಸಿಗುತ್ತವೆ. ಹಾಸನ ಜಿಲ್ಲೆಯ ಸಿಂಗಾರನಹಳ್ಳಿಯಲ್ಲಿ ನಡೆದಿರುವ ಘಟನೆ ಅಂಥ ಒಂದು ತುಣುಕು. ಅಲ್ಲಿನ ಬಸವೇಶ್ವರ ದೇವಾಲಯಕ್ಕೆ ದಲಿತರ ಪ್ರವೇಶ ನಿರಾಕರಿಸಿ, ಎಂಟು ಶತಮಾನಗಳ ಹಿಂದೆಯೆ ಕ್ರಾಂತಿಕಾರಿ ಹೆಜ್ಜೆ ಇಟ್ಟ ಬಸವೇಶ್ವರರನ್ನೂ ಅವಮಾನಿಸಲಾಗಿದೆ.

ಉತ್ತರಪ್ರದೇಶದ ಭಾಗ್ಪತ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಇದೇ ಜುಲೈ 30 ರಂದು ನಡೆದ ಘಟನೆ ಎದೆನಡುಗಿಸುಂತಿದೆ. ರವಿ ಎಂಬ ದಲಿತನೊಬ್ಬ ಮೇಲ್ಜಾತಿ ಜಾಟ್ ಹೆಂಗಸಿನೊಂದಿಗೆ ಓಡಿಹೋದ. ಅಂದೇ ಖಾಪ್ ಪಂಚಾಯಿತಿ ಸಭೆ ಸೇರಿತು. ಅದು ಇತ್ತ ತೀರ್ಪು ಏನೆಂದರೆ; ಆ ಹುಡುಗನ 23 ಮತ್ತು 15 ವರ್ಷದ ಇಬ್ಬರು ತಂಗಿಯರ ಮೇಲೆ ಅತ್ಯಾಚಾರ ಎಸಗಬೇಕು, ಅಷ್ಟೆ ಅಲ್ಲ ಬೆತ್ತಲೆಗೊಳಿಸಿ ಊರಿನ ಬೀದಿಗಳಲ್ಲಿ ಮೆರವಣಿಗೆ ಮಾಡಬೇಕು! ಇದು ಮರುದಿನ ಸುದ್ದಿಯಾದರೂ ಇಂಡಿಯಾದ ಗಣ್ಯಮಾನ್ಯರು ಚಕಾರವೆತ್ತಲಿಲ್ಲ. ಆದರೆ ಬ್ರಿಟಿಷ್ ಸಂಸದರು ಪಾರ್ಲಿಮೆಂಟಿನಲ್ಲಿ ದೂರಿತ್ತರು. ಇದು ಅತ್ಯಂತ ಹೇಯ, ಅಮಾನವೀಯ ಕಠಿಣ ಕ್ರಮ ಕೈಗೊಳ್ಳಿ ಎಂದು ಆಗ್ರಹಿಸಿದರು. ಸರ್ವೋಚ್ಚ ನ್ಯಾಯಾಲಯವು ಹೇಳಿರುವಂತೆ ಇದು ಕಾಂಗರೂ ನ್ಯಾಯ. ಪ್ರಜಾಪ್ರಭುತ್ವದ ಅಣಕ

ಧಾರ್ಮಿಕತೆಯಲ್ಲಿಯೂ ಅಸಮಾನತೆಯನ್ನು ಕಾಪಾಡಿಕೊಳ್ಳುವುದು ದೇವರಿಗೆ ಎಸಗುವ ಅಪಚಾರ. ಎಲ್ಲರೂ ಒಂದೇ ಬಾವಿಯಲ್ಲಿ ನೀರು ಸೇದುವುದು, ದೇವಸ್ಥಾನಗಳಲ್ಲಿ, ಹೋಟೆಲುಗಳಲ್ಲಿ ಎಲ್ಲರಿಗೂ ಪ್ರವೇಶಾವಕಾಶ, ಅಂತರ್ಜಾತೀಯ ಸಹಭೋಜನ, ಅಂತರ್ಜಾತೀಯ ಮದುವೆಗಳ ಹೆಚ್ಚಳ; ಇಂಥ ಕಾರಣಗಳಿಗಾಗಿ ಹಾರ್ದಿಕ್ ಪಟೇಲ್ ವಯಸ್ಸಿನ ಯುವಜನತೆ ಬೃಹತ್ ಹೋರಾಟಗಳನ್ನು ಹಮ್ಮಿಕೊಳ್ಳಬೇಕು. ಆಗ ಮಾತ್ರ ಸಮಾನತೆಯ ಭಾವನೆಯನ್ನು ಮೂಡಿಸಲು ಸಾಧ್ಯ. ಅದಕ್ಕೆ ಸ್ವಲ್ಪ ಮಟ್ಟಿಗಿನ ಉತ್ತರ, ಕಡ್ಡಾಯ ಶಿಕ್ಷಣ ಮತ್ತು ಸಮಾನ ಶಿಕ್ಷಣ. ಅದನ್ನು ಕುರಿತು ಮತ್ತೊಮ್ಮೆ ಚಿಂತಿಸಬಹುದೇನೊ.

■ ಮೂಚಿ

## ಮಾತೇ ಮುತ್ತು

★ ಶಿಕ್ಷಣ ಎನ್ನುವುದು ವೃದ್ಧಾಪ್ಯಕ್ಕೆ ಒಳ್ಳೆಯ ಹೂಡಿಕೆ.

-ಅರಿಸ್ಟಾಟಲ್

★ ಅಗತ್ಯ ಸ್ವಾತಂತ್ರ್ಯಕ್ಕಾಗಿ ಕೆಲಕಾಲ ಸುರಕ್ಷೆಯನ್ನು ಬಿಟ್ಟುಕೊಡುವವರು ಕೊನೆಗೆ ಸ್ವಾತಂತ್ರ್ಯವನ್ನೂ ಉಳಿಸಿಕೊಳ್ಳುವುದಿಲ್ಲ, ಸುರಕ್ಷೆಯನ್ನೂ ಕಳೆದುಕೊಳ್ಳುತ್ತಾರೆ.

-ಬೆಂಜಮಿನ್ ಡಿಸ್ರೇಲಿ

★ ಜೀವನ ಸಂತೋಷದಾಯಕ, ಸಾವು ಶಾಂತಿ ತರುತ್ತದೆ. ಇದರ ನಡುವಣ ಪರಿವರ್ತನೆಯೇ ಕಷ್ಟದ್ದು.

-ಐಸಾಕ್ ಅಸಿಮೊವ್

★ ಸ್ವಾತಂತ್ರ್ಯ ಎಂದರೆ ಜವಾಬ್ದಾರಿ. ಅದಕ್ಕೇ ಹೆಚ್ಚಿನ ಗಂಡಸರು ಅದನ್ನು ಬಯಸುವುದಿಲ್ಲ.

-ಜಾರ್ಜ್ ಬರ್ನಾರ್ಡ್ ಶಾ

★ ಹುಟ್ಟಿದವರು ಸಾಯಲೇಬೇಕು. ಸಾವು ಬೇಕೆಂದರೆ ಹುಟ್ಟಲೇಬೇಕು. ಹಾಗಾಗಿ ದುಃಖ ಪಡುವಂತಹದ್ದು ಏನೂ ಇಲ್ಲ.

-ಭಗವದ್ಗೀತೆ

★ ಉತ್ತಮ ಶಿಕ್ಷಣ ನೀಡುವುದೆಂದರೆ ನಾಲ್ಕನೇ ಒಂದು ಭಾಗ ಸಿದ್ಧತೆ ಹಾಗೂ ನಾಲ್ಕನೇ ಮೂರು ಭಾಗ ಅಭಿನಯ.

-ಗೇಲ್ ಗಾಡ್ವಿನ್

★ ಶಿಕ್ಷಣದ ಶ್ರೇಷ್ಠ ಉದ್ದೇಶ ಜ್ಞಾನಸಾಧನೆಯಲ್ಲ; ಕ್ರಿಯಾ ಸಾಧನೆ.

-ಹರ್ಬರ್ಟ್ ಸ್ಪೆನ್ಸರ್

★ ವೈಫಲ್ಯದಿಂದ ನಿರುತ್ಸಾಹಗೊಳ್ಳಬೇಡಿ. ಅದು ನಿಜಕ್ಕೂ ಒಂದು ಗುಣಾತ್ಮಕ ಅನುಭವವೂ ಆಗಿರುತ್ತದೆ.

-ಜಾನ್ ಕೀಟ್ಸ್

★ ಕೀರ್ತಿ ಎನ್ನುವುದು ನೀರಿನಲ್ಲಿ ತರಂಗಗಳಿದ್ದಂತೆ. ಅದು ಯಾವತ್ತೂ ಇರುವ ವೃತ್ತಕ್ಕಿಂತ ದೊಡ್ಡದಾಗುವುದಿಲ್ಲ; ಚಿಕ್ಕದೇ ಆಗುತ್ತದೆ.

-ವಿಲಿಯಂ ಶೇಕ್ಸ್‌ಪಿಯರ್